ದಿನಾಂಕಃ **02-05-2023** ರಂದು ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ಶ್ರೀ ಜಿ ಆರ್ ವಕೀಲರಿಂದಃ

ನನಗೆ ಮತ್ತು ಎದುರುದಾರರಿಗೆ ಪರಸ್ಪರ ಒಪ್ಪಿಗೆ ಇದ್ದರೂ ಕೂಡ ಪೊಲೀಸ್ ಠಾಣೆಯಲ್ಲಿ ಎದುರುದಾರರನ್ನು ಬಲವಂತವಾಗಿ ಮದುವೆ ಮಾಡಿಕೊಂಡಿದ್ದೇನೆ ಎಂದರೆ ಎದುರುದಾರರು ನನ್ನ ಜೀವನವನ್ನು ಹಾಳು ಮಾಡಿದ್ದಾರೆ ಆದ್ದರಿಂದ ಪೊಲಿಸ್ ಠಾಣೆಯಲ್ಲಿ ದೂರನ್ನು ಕೊಟ್ಟು ಮದುವೆ ಮಾಡಿಸಿಕೊಂಡಿರುತ್ತೇನೆ. ಎದುರುದಾರರಿಗೆ ದೇವರಾಜು ಎಂಬ ಅಣ್ಣ ಇದ್ದಾರೆ ಎಂದರೆ ಸರಿ. ನನ್ನ ಅಣ್ಣನಿಗೆ ಮದುವೆ ಆದ ನಂತರ ನಾವಿಬ್ಬರು ಮದುವೆ ಮಾಡಿಕೊಂಡಿದ್ದೇವೆ ಎಂದು ಸಾಕಷ್ಟು ಬಾರಿ ನನಗೆ ಹೇಳಿರುತ್ತಾರೆ ಎಂದರೆ ಸರಿ. ಎದುರುದಾರರಿಗೆ ಅಣ್ಣ ಇದ್ದರೂ ಕೂಡ ನಾನು ಎದುರುದಾರರನ್ನು ಬಲವಂತವಾಗಿ ಮದುವೆ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ ಎದುರುದಾರರು ನನ್ನ ಜೀವನವನ್ನು ಹಾಳು ಮಾಡಿರುವ ಕಾರಣದಿಂದ ಪೊಲಿಸ್ ಠಾಣೆಯಲ್ಲಿ ಮದುವೆ ಮಾಡಿಸಿಕೊಂಡಿರುತ್ತೇನೆ. ಎದುರುದಾರರು ಬಿ.ಇ. ಓದಿದ್ದಾರೆ ಎಂದರೆ ಸರಿ . ಎದುರುದಾರರು ಬಿ.ಇ. ಓದಿರುವುದರಿಂದ ನನ್ನ ಜೀವನ ಚೆನ್ನಾಗಿರುತ್ತದೆ ಎಂದು ಅವಸರದ ನಿರ್ದಾರ ಮಾಡಿ ಪೊಲಿಸ್ ಠಾಣೆಯಲ್ಲಿ ಮದುವೆ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಮದುವೆಗೆ ಎದುರುದಾರರ ಕಡೆಯಿಂದ ಅವರ ತಂದೆ ತಾಯಿ ಮತ್ತು ಇಬ್ಬರು ಬಾವಂದಿರು ಇನ್ನು ಉಳಿದ ನಾಲ್ಕು ಜನ ಪೊಲಿಸ್ ಠಾಣೆಗೆ ಬಂದಿರುತ್ತಾರೆ. ನನ್ನ ಸೋದರ ಮಾವನ ಹೆಸರು ಲೋಕೇಶ್ ಎಂದರೆ ಸರಿ . ಅವಸರವಾಗಿ ನಾನು ಮದುವೆ ಎದುರುದಾರರನ್ನು ಪೊಲಿಸ್ ಠಾಣೆಯಲ್ಲಿ ನನ್ನ ಮಾವನಾದ ಲೋಕೇಶ್ ರವರ ಚಿತಾವಣೆಯಿಂದ ಆಗಿದೆ ಎಂದರೆ ಸರಿಯಲ್ಲ. ಸಂಪ್ರದಾಯವಾಗಿ ಮದುವೆ ಆದ ಮೇಲೆ ಗಂಡನ ಮನೆಗೆ ಹೋಗುವ ನಿಯಮ ಎಂದರೆ ಸರಿ.

ಈ ಹಂತದಲ್ಲಿ ಶ್ರೀ ಜಿ ಆರ್ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿದ್ದು, ಕೋರಿಕೆ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ತಿಪಟೂರು.